ಯಾದಗಿರಿಯ ಗ್ರಾಮೀಣ ರಸ್ತೆಗಳ ದುಸ್ಥಿತಿ

1407(915); ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಸಂಪರ್ಕ ರಸ್ತೆಗಳು ಶಿಥಿಲಗೊಂಡಿದ್ದು ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ತಿಗೆ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು;

ಇ) ರಸ್ತೆಗಳ ದುಸ್ಥಿತಿಯಿಂದಾಗಿ ಬಸ್ಸುಗಳು ಸಂಚರಿಸದೆ ಗ್ರಾಮೀಣ ಜನರಿಗೆ ತೊಂದರೆಯಾಗಿದ್ದು ಅಲ್ಲಲ್ಲಿ ಪ್ರತಿಭಟನೆ ಮುಷ್ಕರಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸದರಿ ಕ್ಷೇತ್ರದ ಹೆಚ್ಚಿನ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಪಡಿಸಲು ವಿಶೇಷ ಯೋಜನೆ ಏನಾದರೂ ಕೈಗೆತ್ತಿಕೊಳ್ಳಲು ಪರಿಶೀಲನೆ ನಡೆಸಿದೆಯೇ;

ಉ) ಈ ಕ್ಷೇತ್ರದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಹಣ ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಯಾದಗಿರಿ ವಿಧಾನಸಭಾ ಕ್ಷೇತ್ರದ ಕೆಲವು ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪ್ರತಿ ವರ್ಷ ಗ್ರಾಮೀಣ ರಸ್ತೆ ನಿರ್ವಹಣೆ/ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ/ಲೆಕ್ಕಶೀರ್ಷಿಕೆಯಡಿ ಜಿಲ್ಲಾ ಪಂಚಾಯತಿಗಳಿಗೆ ಅನುದಾನ ಒದಗಿಸಲಾಗುತ್ತಿದೆ.

ಅದರಂತೆ ಜಿ.ಪಂ.ಗೆ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ, ಜಿ.ಪಂ.ಗಳಲ್ಲಿ ಕ್ರಿಯಾ ಯೋಜನೆ ರೂಪಿಸಿ ರಸ್ತೆ ನಿರ್ವಹಣೆ/ ಅಭಿವೃದ್ಧಿಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಬಂದಿರುವುದಿಲ್ಲ.

ಈ) ಅಂತಹ ಯಾವುದೇ ವಿಶೇಷ ಯೋಜನೆ ಇರುವುದಿಲ್ಲ.

- ಆದರೆ, ಕಳೆದ 2014–15ನೇ ಸಾಲಿನಲ್ಲಿ ಯಾದಗಿರಿ ಮತಕ್ಷೇತ್ರದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಜಿ.ಪಂ. ವತಿಯಿಂದ ಕೈಗೊಂಡ ರಸ್ತೆ ದುರಸ್ತಿ ಮತ್ತು ಅಭಿವೃದ್ಧಿಯ ವಿವರ ಕೆಳಕಂಡಂತಿದೆ.

ಕ್ರಸಂ.	ಲೆಕ್ಕ ಶೀರ್ಷಿಕೆ	ರಸ್ತೆಯ ಉದ್ದ (ಕಿ.ಮೀ)		ಬಿಡುಗಡೆಯಾದ ಅನುದಾನ	ವೆಚ್ಚ (ರೂ. ಲಕ್ಷಗಳಲ್ಲಿ)
		ಅಭಿವೃದ್ಧಿ	ನಿರ್ವಹಣೆ		
1	3054 ಯೋಜನೆ	–	6.75	18.00	15.937
2	3054 ಯೋಜನೇತರ	–	11.50	55.66	54.14
3	ನಬಾರ್ಡ್–18	3.70	–	35.49	35.49
4	13ನೇ ಹಣಕಾಸು ರಸ್ತೆ	–	15.25	43.74	43.09
5	ಹಚ್.ಕೆ.ಆರ್.ಡಿ.ಬಿ	9.00	–	5.00	5.00
	ಒಟ್ಟು	12.70	33 50	157.89	153.657

- ಇದರೊಂದಿಗೆ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ಯಾದಗಿರಿ ತಾಲ್ಲೂಕಿನಲ್ಲಿ ಅಭಿವೃದ್ಧಿ ಪಡಿಸಲಾದ ರಸ್ತೆಗಳ ವಿವರಗಳನ್ನು ಅನುಬಂಧ ರಲ್ಲಿ ನೀಡಿದೆ.

ಊ) ಪ್ರಸಕ್ತ 2015–16ನೇ ಸಾಲಿನಲ್ಲಿ ಯಾದಗಿರಿ ಮತಕ್ಷೇತ್ರಕ್ಕೆ ವಿವಿಧ ಲೆಕ್ಕ ಶೀರ್ಷಿಕೆಯಡಿ ನಿಗದಿ ಪಡಿಸಿದ ಅನುದಾನ ಕೆಳಕಂಡಂತಿದೆ.

ಕ್ರ.ಸಂ.	ಲೆಕ್ಕ ಶೀರ್ಷಿಕೆ	2015–16ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನ (ರೂ. ಲಕ್ಷಗಳಲ್ಲಿ)
1	3054 ಸಿ.ಎಂ.ಜಿ.ಎಸ್.ವೈ	54.00
2	ಟಾಸ್ಕ್‌ಫೋರ್ಸ್	56.60
	ಒಟ್ಟು	**110.60**

- ಯಾದಗಿರಿ ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿ ಅನುಮೋದಿತ ಕಾಮಗಾರಿಗಳಿಗೆ ಪ್ರಸ್ತುತ ಸಾಲಿನಲ್ಲಿ ಮೊದಲನೇ ಕಂತಿನ ಅನುದಾನ ರೂ. 40.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

- ಇದರೊಂದಿಗೆ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿಯಿಂದ ಅನುಷ್ಠಾನಗೊಳಿಸುವ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–3ರಡಿ ಯಾದಗಿರಿ ವಿಧಾನ ಸಭಾ ಕ್ಷೇತ್ರದಲ್ಲಿ 4 ರಸ್ತೆ ಕಾಮಗಾರಿಗಳ ಒಟ್ಟು ಉದ್ದ 19.85 ಕಿ.ಮೀ.ಗಳನ್ನು ಅಂದಾಜು ಮೊತ್ತ ರೂ. 1288.00 ಲಕ್ಷಗಳಲ್ಲಿ ಅಭಿವೃದ್ಧಿ ಪಡಿಸಲು ಅನುಮೋದನೆಯಾಗಿದ್ದು, ಸದರಿ ಕಾಮಗಾರಿಗಳು ಪ್ರಸ್ತುತ ಟೆಂಡರ್ ಪ್ರಕ್ರಿಯೆಯಲ್ಲಿ ಇತ್ಯರ್ಥಪಡಿಸುವ ಹಂತದಲ್ಲಿದೆ.